ಅದಕ್ಕೆ ಕಾರಣವೇನು? ಯಾಕೆ ಹೀಗಾಗಿದೆ ಎನ್ನುವ ಬಗ್ಗೆಯೂ ವಿಚಾರಣೆ ಮಾಡುತ್ತೇವೆ. ಈ ರೀತಿ ಆಗದ ಹಾಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ಸೂಕ್ತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**(ಒ) ವಿಷಯ : ಸಿರಗುಪ್ಪದಲ್ಲಿ ನಡೆದ ಪೋಲೀಸ್ ಲಾಠಿ ಛಾರ್ಜ್ ಬಗ್ಗೆ**

**ಶ್ರೀ ಎಂ. ಎಸ್. ಸೋಮಲಿಂಗಪ್ಪ ಸಿರಗುಪ್ಪ) :** ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಪೋಲೀಸ್ ಲಾಠಿ ಛಾರ್ಜ್‌ನಿಂದು ಒಬ್ಬರು ಸತ್ತಿದ್ದಾರೆ. ಅದರ ಬಗ್ಗೆ ಒಂದು ನಿಮಿಷ ಮಾತನಾಡಬೇಕು.

**ಅಧ್ಯಕ್ಷರು :** ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ನೀವು ನೋಟೀಸ್ ಕಳುಹಿಸಬೇಕು.

**ಶ್ರೀ ಎಂ.ಹೆಚ್.ಎಸ್. ಸೋಮಲಿಂಗಪ್ಪ :** ನೋಟೀಸ್ ಕಳುಹಿಸಿ ಮೂರು ದಿವಸ ಆಯಿತು

**ಅಧ್ಯಕ್ಷರು :** ನೋಟೀಸ್ ಕಳುಹಿಸಿ ನಾಳೆ ಅವಕಾಶ ಮಾಡಿಕೊಡುತ್ತೇನೆ.

**ಓ) ಕರ್ನಾಟಕ ರಾಜ್ಯ ಪತ್ರದಲ್ಲಿ ಸರ್ಕಾರಿ ಆದೇಶಗಳ ಆಂಗ್ಲಭಾಷೆಯಲ್ಲಿ ಪ್ರಕಟವಾಗುತ್ತಿರುವ ಬಗ್ಗೆ.**

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :** ಒಂದು ನಿಮಿಷ ಹೇಳುತ್ತೇನೆ. ಸ್ವಲ್ಪ ಕುಳಿತುಕೊಳ್ಳಿ. ತಾವು ಏಳುವ ಉದ್ವೇಗದಲ್ಲಿ ನಾನು ಏನು ಹೇಳಬೇಕು ಎಂದು ಅರ್ಥ ಆಗುವುದಿಲ್ಲ. ಈ ಸರ್ಕಾರದ ನೀತಿ 'ಆಡಳಿತ ಭಾಷೆ ಕನ್ನಡ' ಮಾನ್ಯ ಮುಖ್ಯಮಂತ್ರಿಗಳಲ್ಲಿ ಗಮನ ಸೆಳೆಯುತ್ತಿದ್ದೇನೆ. ಸರ್ಕಾರದ ನೀತಿ ಹಾಗು ಆಡಳಿತ ಭಾಷೆ ಕನ್ನಡ. ಆದರೆ ಸರ್ಕಾರದ ಎಲ್ಲಾ ಆದೇಶಗಳೂ ಇಂಗ್ಲೀಷ್‌ನಲ್ಲಿವೆ. ಉತ್ತರ ಕೊಟ್ಟಿರತಕ್ಕದ್ದು ಇಂಗ್ಲೀಷ್, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಕನ್ನಡದಲ್ಲಿ ಕೊಡಲೇ ಇಲ್ಲ, ಇದು ಇಂಗ್ಲೀಷ್‌ನಲ್ಲಿದೆ. ಐಪಿಡಿ ಸಾಲಪ್ಪನವರು ಪೌರ ಕಾರ್ಮಿಕರಿಗೆ ಸೌಲಭ್ಯಗಳನ್ನು ಕೊಡುವ ಬಗ್ಗೆ ಅವರು ಕೊಟ್ಟಿರತಕ್ಕ ವರದಿ ಯಥಾವತ್ತಾಗಿ ಇಂಗ್ಲೀಷ್‌ನಲ್ಲಿ ಹಾಕಿದ್ದಾರೆ. ಇದರ ಜೊತೆಗೆ ಕರ್ನಾಟಕ ರಾಜ್ಯ ಪತ್ರದ ಪ್ರತಿ ಒಂದು ಆದೇಶಗಳೂ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನೋಡಿ ಎಲ್ಲಾ ಇಂಗ್ಲೀಷ್‌ನಲ್ಲಿದೆ. ಒಂದಾದರೂ ಕನ್ನಡದಲ್ಲಿ ಇದೆಯೇ? ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ನೋಡಿ ಪ್ರತಿ ಒಂದು ಆದೇಶ ಇಂಗ್ಲೀಷ್‌ನಲ್ಲಿದೆ. ನಮಗೆ ಒದಗಿಸಿರುವುದು, ಇಡೀ ಸದನಕ್ಕೆ ಒದಗಿಸಿರುವುದು ಎಲ್ಲಾ ಕನ್ನಡ ಇದೆಯೇ, ಇಲ್ಲ ಇಂಗ್ಲೀಷ್‌ನಲ್ಲಿದೆ. ತಮಗೆ ಹೇಳುತ್ತೇನೆ. ಇದರಲ್ಲಿ ಯಾವುದಾದರಾದರೂ ಒಂದರ ಬಗ್ಗೆ ಸರ್ಕಾರದ ನಿಲುವು ಏನು?

**ಅಧ್ಯಕ್ಷರು :** ಉತ್ತರ ಹೇಳುತ್ತಾರೆ.

**ಶ್ರೀ ವಾಟಾಳ್ ನಾಗರಾಜ್ :** ಸರ್ಕಾರದ ನಿಲುವು ಏನು ಎಂಬುದನ್ನು ಹೇಳಲಿ.

**ಅಧ್ಯಕ್ಷರು :** ಸರ್ಕಾರದ ನಿಲುವನ್ನು ಹೇಳುತ್ತಾರೆ.

**ಶ್ರೀ ವಾಟಾಳ್ ನಾಗರಾಜ್ :** ಈ ರಾಜ್ಯಪತ್ರ–ಮೇಲೆ ಹೆಸರಿಗೆ ರಾಜ್ಯಪತ್ರ: ಆದರೆ ಎಲ್ಲಾ ಆದೇಶ ಇಂಗ್ಲೀಷ್‌ನಲ್ಲಿದೆ. ಆದರೆ ರಾಜ್ಯಪತ್ರದ ಹೆಸರು ಕನ್ನಡದಲ್ಲಿ ಇದೆ. ಇದರ ಬಗ್ಗೆ ನಾವೇನು ಮಾಡಬೇಕು? ಇದರ ಬಗ್ಗೆ ನಾವು ಮಾತನಾಡಬೇಕೇ ಅಥವಾ ಬಿಡಬೇಕೇ? ತಾವು ಹೇಳಿ, ಸರ್ಕಾರದ ನೀತಿ ಬಗ್ಗೆ ಹೇಳಲಿ. ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಅಧ್ಯಕ್ಷರು :** ಮಾನ್ಯ ವಾಟಾಳ್ ನಾಗರಾಜ್ ಅವರೆ, ಮಾನ್ಯ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.